# ಸ್ವಾಮಿ ಪ್ರಭವಾನಂದ (೧೮೯೩-೧೯೭೬)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**


ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೪**

ಬರೆಯುವುದರ ಬಗ್ಗೆ ಅವರು ನನಗೆ ಹೇಳಿದ್ದರು–''ನೀನು ಬರೆ. ಆದರೆ ಅಮೆರಿಕನ್ನರಿಂದ ತಿದ್ದುಪಡಿ ಮಾಡಿಸು. ಅವರು ವೇದಾಂತವನ್ನು ತಮ್ಮ ಭಾಷೆಯಲ್ಲೆ ತಿಳಿದುಕೊಳ್ಳಲಿಚ್ಛಿಸುತ್ತಾರೆ. ಅವರಿಗೆ ನಿನ್ನ ಶಬ್ದಗಳು ಅರ್ಥವಾಗದಿದ್ದರೆ, ಅಥವಾ ಮತ್ತೆ ಮತ್ತೆ ಪಾರಿಭಾಷಿಕ ಶಬ್ದಗಳಿಂದ ತಡವರಿಸುತ್ತಿದ್ದರೆ, 'ಇದು ಅರ್ಥ ವಾಗುವುದಿಲ್ಲ' ಎಂದು ಪುಸ್ತಕವನ್ನು ಮುಚ್ಚಿಟ್ಟು ಓದುವುದನ್ನು ನಿಲ್ಲಿಸಿಬಿಡುತ್ತಾರೆ. ಆದ್ದರಿಂದಲೇ ನನ್ನ ಎಲ್ಲ ಪುಸ್ತಕಗಳನ್ನೂ ಇಷರ್‌ವುಡ್, ಆನಂದಪ್ರಾಣಾ ಮುಂತಾದವರಿಂದ ಸರಿಯಾಗಿ ತಿದ್ದುಪಡಿ ಮಾಡಿಸಿ ನಂತರ ಮುದ್ರಿಸುತ್ತೇನೆ. ಆದರೆ ವೇದಾಂ ತದ ತತ್ತ್ವ ಅಥವ ಸಿದ್ಧಾಂತದಲ್ಲಿ ಯಾವ ಬದಲಾವಣೆಯೂ ಇರದಂತೆ ಎಚ್ಚರ ವಹಿಸುತ್ತೇನೆ.''

"Vedanta and the West' ಪತ್ರಿಕೆಯು ಹಾಲಿವುಡ್‌ನಿಂದ ಹೊರಡಿಸಲಾಗುತ್ತದೆ. ಪತ್ರಿಕೆಯು ಮಹಾರಾಜರ ಸಂಪಾದನೆಯಲ್ಲಿ ಸುಮಾರು ೩೦ ವರ್ಷ ನಡೆಯಿತು. ೧೯೭೦ರ ಡಿಸೆಂಬರ್‌ನಲ್ಲಿ, ನಾನು ತಲುಪುವ ೬ ತಿಂಗಳ ಮೊದಲು ಅದು ನಿಂತುಹೋಯಿತು. ನಾನು Vedanta and the West ಪತ್ರಿಕೆಯನ್ನು ಪ್ರಶಂಸಿಸಿದಾಗ ಮಹಾರಾಜರು ಹೇಳಿದರು, ''ನೋಡು, ನಾನೀಗ ವೃದ್ಧನಾಗಿದ್ದೇನೆ, ಅದಲ್ಲದೆ ಹೃದಯಾಘಾತವಾಗಿದೆ. ಒಳ್ಳೆಯ ಲೇಖಕರು ಸಿಗುತ್ತಿಲ್ಲ. ಪತ್ರಿಕೆಯ ಗುಣಮಟ್ಟ ಕೆಳಗಿಳಿಯಿತು. ಅದಲ್ಲದೆ ಪತ್ರಿಕೆಯು ನಷ್ಟದಲ್ಲಿ ನಡೆಯುತ್ತಿತ್ತು. ಆದ್ದರಿಂದ ಅದನ್ನು ನಿಲ್ಲಿಸಲೇಬೇಕಾಯಿತು. ನೀನು ಮೊದಲೇ ಬಂದಿದ್ದರೆ, ಅದನ್ನು ನಡೆಸುವ ಪ್ರಯತ್ನ ಮಾಡುತ್ತಿದ್ದೇನೋ. 'Prabuddha Bharata' ಹಾಗೂ 'Vedanta Kesari' ಪಾಂಡಿತ್ಯಪೂರ್ಣ ಪತ್ರಿಕೆಗಳು. ಲೇಖನಗಳು 'ಪುಷ್ಪಿತ'ವಾದ, ಪ್ರಾಚೀನ ಹಾಗೂ ಪಾರಿಭಾಷಿಕ ಶಬ್ದಗಳಿಂದ ತುಂಬಿವೆ. ಸಾಮಾನ್ಯ ಓದುಗರಿಗೆ ಅರ್ಥವಾಗುವುದಿಲ್ಲ. 'Vedanta and the West' ಪತ್ರಿಕೆಯ ಭಾಷೆ ಸರಳ–ಸಹಜವಾದುದರಿಂದ ಅದು ಯಶಸ್ವಿಯಾಗಿತ್ತು.''

ನಾನು ಒಂದು ಸಲ ಬೆಳಗ್ಗೆ ೧೦.೩೦ರ ಹೊತ್ತಿಗೆ ಮಹಾರಾಜರನ್ನು ಭೇಟಿಯಾಗಲು ಹೋದಾಗ ೧೫– ೨೦ ನಿಮಿಷಗಳ ಕಾಲ ಅವರೊಂದಿಗೆ ನಾನಾ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದೆ. ಆಗ ಮನಬಿಚ್ಚಿ ಅವರೊಂದಿಗೆ ಒಡನಾಡುವ ಸುಸಂದರ್ಭ ಒದಗಿತ್ತು. ಒಂದು ದಿನ ಅವರು ನನಗೆ ಹೇಳಿದರು, ''ಚೇತನಾನಂದ, ನನಗೆ ಖಿನ್ನತೆ ಉಂಟಾಗಿದೆ.'' ಕೇಳಿದೆ, ''ಏಕೆ?''



ಅವರೆಂದರು, ''ನೋಡು, ಮುಂಚೆ ನಾನು ಮಂದಿರಕ್ಕೆ ಹೋಗಿ ಅಲ್ಲಿ ಸ್ವಲ್ಪ ಧ್ಯಾನಜಪವನ್ನು ಮಾಡುತ್ತಿದ್ದೆ. ಈಗ ಅಲ್ಲಿಗೆ ಹೋಗಲಾಗುತ್ತಿಲ್ಲ. ತಲೆ ತಿರುಗುತ್ತದೆ. ಹೃದಯದ ಸಮಸ್ಯೆ ಇದೆ.'' ನಾನೆಂದೆ, ''ಮಹಾರಾಜ್, ನೀವೀಗ ಮಂದಿರಕ್ಕೆ ಹೋಗಿ ಜಪಧ್ಯಾನ ಮಾಡುವ ಅಗತ್ಯವಿಲ್ಲ. ನೀವು ಭಗವಂತನ ಸ್ಮರಣ–ಮನನವನ್ನು ಮಾಡುತ್ತಿರುವಿರಿ. ಅದಲ್ಲದೆ ಠಾಕೂರರ ಬಹುತೇಕ ಮಂದಿ ಶಿಷ್ಯಂದಿರ ಸಂಗಲಾಭವನ್ನು ಪಡೆದಿರುವಿರಿ. ಅವರ ನೆನಪುಗಳು, ಉಪದೇಶಗಳು ನಿಮ್ಮ ಮನಸ್ಸಿನಲ್ಲಿ ಸದಾ ಇರುತ್ತವೆ. ಈ ರೀತಿಯ ಸಹಜವಾದ ಅರಿವೇ ಸಹಜ ಯೋಗವಲ್ಲವೆ? ಈ ನಿರಂತರ ಸ್ಮರಣ-ಮನನವು ಜಪಧ್ಯಾನಕ್ಕಿಂತಲೂ ಮಿಗಿಲಾದುದು.''

ಇದನ್ನು ಕೇಳಿದ ಮಹಾರಾಜರು ಆನಂದಭರಿತರಾದರು. ಅವರೆಂದರು, ''ನೋಡು ಚೇತನಾನಂದ, ಸಾಧುಗಳಿಗೂ ಸಾಧು ಸಂಗ ಅವಶ್ಯವೆಂದು ಇದಕ್ಕೇ ಹೇಳುವುದು. ನಿನ್ನ ಮಾತುಗಳಿಂದ ನನ್ನ ಖಿನ್ನತೆ ದೂರವಾಯಿತು.''

ಮಹಾರಾಜರ ನಿವಾಸ ಮಂದಿರದ ಹತ್ತಿರವಿತ್ತು. ಅವರು ಸಂನ್ಯಾಸಿನಿಯರ ಜೊತೆಯಲ್ಲಿ ಊಟ ಮಾಡುತ್ತಿದ್ದರು ಒಂದು ದಿನ ಅವರು ಫೋನ್ ಮಾಡಿ ನನ್ನನ್ನು ಕರೆದರು. ನಾನು ಅವರ ಕೋಣೆಗೆ ಹೋದಾಗ ಅವರೆಂದರು, ''ಈಗ ಸ್ವಾಮಿ ವಿಜ್ಞಾನಾನಂದಜಿ ಮಹಾರಾಜರ ನೆನಪುಗಳು ಬರುತ್ತಿವೆ. ನಾನು ಹೇಳುತ್ತೇನೆ, ನೀನು ಬರೆ.'' ನಾನೆಂದೆ, ''ಮಹಾರಾಜ್, ಅದು ಸ್ವಲ್ಪ ಕಷ್ಟ. ನಿಮ್ಮ ಮಾತಿನ ಓಟಕ್ಕೆ ಅಡಚಣೆಯುಂಟಾಗುತ್ತದೆ. ಆದ್ದರಿಂದ ನೀವು ಟೇಪ್‌ನಲ್ಲಿ ಹೇಳುತ್ತ ಹೋಗಿ, ನಾನು ನಂತರ ಅದನ್ನೇ ಬರಹಕ್ಕೆ ಸರಿಯಾಗಿ ಇಳಿಸುವೆ.'' ಈ ಸ್ಮೃತಿಕಥೆಯು 'ಉದ್ಬೋಧನ'ದಲ್ಲಿ ಮುದ್ರಿತವಾಯಿತು.

ಶ್ರೀರಾಮಕೃಷ್ಣರ ಐವರು ಶಿಷ್ಯರು ಅಮೆರಿಕದಲ್ಲಿ ವೇದಾಂತ ಪ್ರಚಾರವನ್ನು ಮಾಡಿದರು. ಪಾಶ್ಚಾತ್ಯದಲ್ಲಿ ಅತ್ಯದ್ಭುತವಾಗಿ ಕೆಲಸ ಮಾಡಿದ, ಮುಂದಿನ ಪೀಳಿಗೆಯ ಸಾಧುಗಳಲ್ಲಿ ಸ್ವಾಮಿ ಪ್ರಭವಾನಂದರು ಪ್ರಮುಖರು. ಅವರು ತಮ್ಮ ಜೀವನ ಸಂಗ್ರಾಮ ಹಾಗೂ ಸಾರ್ಥಕತೆಯ ವಿಷಯವನ್ನು ನನ್ನೆದುರು ಎತ್ತಿ ಹಿಡಿಯುತ್ತಿದ್ದರು. ೧೯೨೩ರ ಜೂನ್ ತಿಂಗಳಿನಲ್ಲಿ ಅವರು ಸ್ವಾಮಿ ಪ್ರಕಾಶಾನಂದರೊಂದಿಗೆ ಬಾಸ್ಟನ್‌ಗೆ ಬಂದರು. ಅವರು ಹೇಳಿದರು, ''ಸ್ವಾಮಿ ಸಚ್ಚಿದಾನಂದರು ಪ್ರಾರಂಭಿಸಿದ ಲಾಸ್ ಏಂಜಲಿಸ್ ಕಾರ್ಯಕ್ಕಾಗಿ ನನ್ನನ್ನು ಕರೆತರಲಾಗಿತ್ತು. ಅವರು ಪುನಃ ಭಾರತಕ್ಕೆ ಮರಳಿದರು. ನಾವು ಬಾಸ್ಟನ್‌ಗೆ ಬಂದಿಳಿದಾಗ ಸ್ವಾಮಿ ಪರಮಾನಂದರು ಲಾಸ್ ಏಂಜಲಿಸ್‌ನಲ್ಲಿ ಸ್ವಲ್ಪ ಜಮೀನನ್ನು ಕೊಂಡುಕೊಂಡಿದ್ದು ನನ್ನನ್ನು ತಮ್ಮ ಸಹಕಾರಿಯಾಗಿ ಮಾಡಿಕೊಳ್ಳಬೇಕೆಂದಿದ್ದರೆಂದು ತಿಳಿಯಿತು. ಪ್ರಕಾಶಾನಂದರು ಅದಕ್ಕೊಪ್ಪದೆ ನನ್ನನ್ನು ತಮ್ಮೊಂದಿಗೆ ಸ್ಯಾನ್‌ಫ್ರಾನ್ಸಿಸ್ಕೊಗೆ ಕರೆದೊಯ್ದರು. ೧೯೦೬ರಿಂದ ಅಲ್ಲಿ ಕೆಲಸಮಾಡಿದ್ದ ಅವರು ೧೯೧೬ರಲ್ಲಿ ಸ್ವಾಮಿ ತ್ರಿಗುಣಾತೀತಾನಂದಜಿ ಮಹಾರಾಜ್ ತೀರಿಕೊಂಡ ಬಳಿಕ ಅಲ್ಲಿನ ಅಧ್ಯಕ್ಷ ರಾದರು.''

ಪ್ರಭವಾನಂದರೆಂದರು, ''ಸ್ವಾಮಿ ಪ್ರಕಾಶಾನಂದರು ಮೊದಲ ೬ ತಿಂಗಳುಗಳು ವಾರಕ್ಕೆ ಒಂದು ದಿನ 'ಗೀತೆ'ಯ ತರಗತಿಗಳನ್ನು ತೆಗೆದುಕೊಳ್ಳಲು ಹೇಳಿದರು. ಕೊನೆಗೆ ಒಂದು ರವಿವಾರ ಉಪನ್ಯಾಸ ನೀಡಲು ಹೇಳಿದರು.''

ಪ್ರಭವಾನಂದರು ನನಗೆ ತಮ್ಮ ಅನುಭವವನ್ನು ಈ ರೀತಿ ಹೇಳಿದರು. ''ನನಗೆ ಎಷ್ಟೊಂದು ಗಾಬರಿಯಾಯಿತೆಂದರೆ, ಎಲ್ಲವೂ ಶೂನ್ಯವಾಗಿಬಿಟ್ಟಿತು. ಕೆಲವು ನಿಮಿಷಗಳ ನಂತರ ನಾನು ಸಭಾಂಗಣವನ್ನು ಬಿಟ್ಟು ಕೋಣೆಗೆ ಬಂದು, ಬಾಗಿಲನ್ನು ಮುಚ್ಚಿ ಅಳತೊಡಗಿದೆ. ೧೦-೧೫ ನಿಮಿಷಗಳ ಬಳಿಕ ಪ್ರಕಾಶಾನಂದರು ಸಭಾಂಗಣಕ್ಕೆ ಹೋಗಿ ನೋಡಿದಾಗ, ಎಲ್ಲರೂ ಹೊರಟುಹೋಗಿದ್ದರು. ಅವರು ನನ್ನ ಕೋಣೆಗೆ ಬಂದು ನನ್ನನ್ನು ಸಂತೈಸುತ್ತ ಹೇಳಿದರು, 'ನೀನೇಕೆ ಪ್ರಶ್ನೋತ್ತರ ಮಾಡಿಸಲಿಲ್ಲ?' ''

ನನಗೆ ನೆನಪಿದೆ-ಹಾಲಿವುಡ್ ತಲುಪಿದ ಒಂದು ತಿಂಗಳಿನಲ್ಲಿಯೆ ನನಗೆ ರವಿವಾರದಂದು ಉಪನ್ಯಾಸ ನೀಡಲು ಹೇಳಲಾಯಿತು. ಭಾಷಣದ ಬಳಿಕ ಮಹಾರಾಜರ ಕೋಣೆಗೆ ಹೋದಾಗ, ನನಗೆ ಸಭಾಕಂಪನವಾಯಿತೇ ಎಂದು ಕೇಳಿದರು. ನಾನೆಂದೆ, ''ನನ್ನ ಕಾಲುಗಳು ನಡುಗಲಿಲ್ಲ, ಆದರೆ ಹೊಟ್ಟೆಯಲ್ಲಿ ಕಸಿವಿಸಿಯಾಗುತ್ತಿತ್ತು.'' ಅವರು ನಕ್ಕು ಈಗಾಗಲೆ ಹೇಳಿರುವ ತಮ್ಮ ಅನುಭವವನ್ನು ಹೇಳಿದರು. ನನಗೆ ಪ್ರೇರಣೆ ನೀಡುತ್ತ ಅವರು, ''ನೋಡಪ್ಪ, ಸ್ವಲ್ಪ ಸಭಾಕಂಪನ ಇರುವುದು ಒಳ್ಳೆಯದೆ. ಆಗ ಶ್ರೋತೃಗಳ ಸಹಾನುಭೂತಿ ದೊರೆಯುತ್ತದೆ!'' ಎಂದರು.

ಸ್ಯಾನ್ ಫ್ರಾನ್ಸಿಸ್ಕೊದಲ್ಲಿ ಎರಡು ವರ್ಷ ಕೆಲಸ ಮಾಡಿದ ನಂತರ ಪ್ರಭವಾನಂದರು ಪೋರ್ಟ್‌ಲ್ಯಾಂಡ್ ವೇದಾಂತ ಕೇಂದ್ರವನ್ನು ತೆರೆದರು. ೧೯೨೦ ರಿಂದ ೧೯೪೦ರ ತನಕ ಅಮೆರಿಕದಲ್ಲಿ ವೇದಾಂತ ಪ್ರಚಾರವನ್ನು ಮಾಡುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಜನರು 'ಯೋಧ' ಹಾಗೂ 'ಸ್ವಾಮಿ'ಗಳ ಮೂಲಕ ಹಣ, ಸೌಂದರ್ಯ ಹಾಗೂ ದೈಹಿಕ ಶಕ್ತಿಗಳನ್ನು ಪಡೆಯಬಹುದೆಂದು ತಿಳಿದಿದ್ದರು. ಕೆಲವೆಡೆ ಜನಾಂಗೀಯ ದ್ವೇಷ ಕೂಡ ಇತ್ತು. ನಂತರ ೧೯೩೦ರಲ್ಲಿ ದಾರುಣ ಆರ್ಥಿಕ ಹಿಂಜರಿತವನ್ನೂ ಎದುರಿಸಬೇಕಾಯಿತು.

೧೯೨೯ರ ಡಿಸೆಂಬರ್ ತಿಂಗಳಿನಲ್ಲಿ ಸ್ವಾಮಿ ಪ್ರಭವಾನಂದರು ಸಿಸ್ಟರ್ ಲಲಿತಾ (ಶ್ರೀಮತಿ ಕ್ಯಾರಿ ವೈಕಾಫ್) ಅವರಿಂದ ಆಮಂತ್ರಿತರಾಗಿ ಹಾಲಿವುಡ್‌ನ ವೇದಾಂತ ಸೆಂಟರ್ ಅನ್ನು ಪ್ರಾರಂಭಿಸಿದರು. ಲಲಿತಾ, ಶಾಂತಿ, ಹಾಗೂ ಹೆಲೆನ್ - ಈ ಮೂವರು ಸೋದರಿಯರು ಪ್ಯಾಸೆಡೊನಾದಲ್ಲಿ ಸ್ವಾಮೀಜಿಯವರ ಆತಿಥೇಯರಾಗಿದ್ದರು; ಶಾಂತಿ ಸ್ವಾಮೀಜಿಯ ಸೆಕ್ರೆಟರಿಗಳಾಗಿದ್ದರು. ಪ್ರಭವಾನಂದರು ಲಾಸ್ ಏಂಜಲೀಸ್ ತಲುಪಿದಾಗ ಪರಮಾನಂದರು ಅಲ್ಲಿ ಒಂದು ಕೇಂದ್ರವನ್ನು ತೆರೆದರು.

೧೯೩೫ರ ಆಗಸ್ಟ್ ತಿಂಗಳಿನಲ್ಲಿ ಪ್ರಭವಾನಂದರು ಸಿಸ್ಟರ್ ಲಲಿತಾ ಅವರ ಜೊತೆಯಲ್ಲಿ ಜಪಾನನ್ನು ಹಾದು ಭಾರತಕ್ಕೆ ಹೋದರು. ಆಗ ಅವರು ಭಾರತದ ವಿವಿಧ ಸ್ಥಳಗಳಿಗೆ ಭೇಟಿಯಿತ್ತರು. ಅವರು ಹಾಗೂ ಲಲಿತಾ ಸಾರಗಾಛಿಯಲ್ಲಿ ಸ್ವಾಮಿ ಅಖಂಡಾನಂದರ ದರ್ಶನವನ್ನು ಪಡೆದು, ಸ್ವಾಮಿ ವಿಜ್ಞಾನಾನಂದರೊಂದಿಗೆ ವಿಷ್ಣುಪುರ, ಕಾಮಾರಪುಕುರ, ಜಯರಾಂಬಾಟಿಗೆ ಹೋದರು. ೧೯೩೬ರಲ್ಲಿ ಭಾರತದಿಂದ ಹಿಂದಿರುಗಿ

ದಾಗ ಹಾಲಿವುಡ್‌ನಲ್ಲಿ ಮಂದಿರ ನಿರ್ಮಾಣದ ಸಂಕಲ್ಪ ಮಾಡಿದರು. ಆಗ ಭಾಷಣಗಳನ್ನು ಕೇಳಲು ಬಹಳ ಜನ ಬರುತ್ತಿದ್ದುದರಿಂದ ಗ್ರೀನ್ ಹೌಸ್‌ನ ಲಿವಿಂಗ್ ರೂಂನಲ್ಲಿ ಸ್ಥಳಾವಕಾಶವಿರುತ್ತಿರಲಿಲ್ಲ. ಮಂದಿರಕ್ಕಾಗಿ ಅವರು ಭಾರತದಿಂದ ಸುಂದರ ಶಿಲ್ಪಾಕೃತಿಯ ಸಿಂಹಾಸನವನ್ನು ತಯಾರಿಸಿ ತಂದಿದ್ದರು. ಆವರು, ''ನೋಡು, ಈ ಸಿಂಹಾಸನವನ್ನು ಠಾಕೂರರ ಶಿಷ್ಯದ್ವಯರು –ಅಖಂಡಾನಂದ ಹಾಗೂ ವಿಜ್ಞಾನಾನಂದರು ಸ್ಪರ್ಶಿಸಿರುವರು'' ಎಂದಿದ್ದರು.

ಹಾಲಿವುಡ್ ಮಂದಿರವು ೧೯೩೮ರಲ್ಲಿ ನಿರ್ಮಿತವಾಗಿದ್ದು ಅದಕ್ಕೆ ೧೨೫೦೦ ಡಾಲರ್‌ಗಳ ಖರ್ಚು ತಗುಲಿತ್ತು. ಅಮೇರಿಕದ ಬಹುತೇಕ ಮಂದಿ ಸಾಧುಗಳು ಅದರ ಸಮರ್ಪಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದಕ್ಕೂ ಮುನ್ನ ಮಹಾಪುರುಷ ಮಹಾರಾಜರು ಬೇಲೂರು ಮಠದಿಂದ ಶ್ರೀರಾಮಕೃಷ್ಣರ ಅಸ್ಥಿಯನ್ನು ಪ್ರಭವಾನಂದರಿಗೆ ಕಳುಹಿಸಿದ್ದರು. ಅದಲ್ಲದೆ ಅವರು ತಾವೇ ಸ್ವತಃ ಅನೇಕ ಅಸ್ಥಿಗಳನ್ನು ಸಂಗ್ರಹಿಸಿದ್ದರು.

ಹಾಲಿವುಡ್ ಸೆಂಟರ್ ಹೇಗೆ ಮೇಲೆದ್ದಿತೆಂದು ಅವರು ನನಗೆ ವರ್ಣಿಸಿದ್ದರು. ನನಗೆ ಮಹಾರಾಜರು ಹೇಳಿದ್ದರು, ''ಆ ಸಮಯದಲ್ಲಿ (೧೯೪೦–೧೯೫೦) ಹೆಚ್ಚು ಜನ ಬರುತ್ತಿರಲಿಲ್ಲ. ನಾನಾಗ ಗೀತೆ, ಉಪನಿಷತ್ತು, ಭಾಗವತ, ಯೋಗಸೂತ್ರ, ವಿವೇಕ ಚೂಡಾಮಣಿ ಮುಂತಾದ ಶಾಸ್ತ್ರಗ್ರಂಥಗಳನ್ನು ಅನುವಾದಿಸಲು ಪ್ರಾರಂಭಿಸಿದೆ.'Vedanta and the West' ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿದೆ. ನಂತರ ಜನರಲ್ ಹರ್ಡ್, ಆಲ್ಡಸ್ ಹಕ್ಸ್ಲೆ, ಮತ್ತು ಕ್ರಿಸ್ಟೋಫರ್ ಇಷರ್‌ವುಡ್ ಬಂದರು. ೧೯೩೯ರಲ್ಲಿ ಜೆರಾಲ್ಡ್ ಅವರನ್ನು ಭೇಟಿಯಾದೆ. ಆಲ್ಡಸ್ ಮತ್ತು ಕ್ರಿಸ್‌ರನ್ನು ಅವರೇ ಕರೆತಂದರು. ಅವರು pacifist (ಯುದ್ಧ ವಿರೋಧಿ). ಕ್ರಿಸ್ ನನ್ನ ಲೇಖನಗಳನ್ನು ತಿದ್ದುಪಡಿ ಮಾಡುತ್ತಿದ್ದರು. ಜೆರಾಲ್ಡ್ ಹಾಲಿವುಡ್ ಮಂದಿರದಲ್ಲಿ ಭಾಷಣ ಮಾಡಿದಾಗ ಸಭಾಂಗಣ ಶ್ರೋತೃಗಳಿಂದ ಕಿಕ್ಕಿರಿದು ತುಂಬಿರುತ್ತಿತ್ತು. ಜಾನ್ ಯೇಲ್ (ಸ್ವಾಮಿ ವಿದ್ಯಾತ್ಮಾನಂದ) ವೇದಾಂತ ಪ್ರೆಸ್ ಹಾಗೂ ಪುಸ್ತಕ ಮಳಿಗೆಗಾಗಿ ಬಹಳ ಶ್ರಮಿಸಿದ್ದರು. ಅವರು ಪತ್ರಿಕೆಯ ಸಂಪಾದಕರಲ್ಲಿ ಒಬ್ಬರಾಗಿದ್ದರು.'' ಪ್ರಭವಾನಂದರು ಅನೇಕ ಅಮೇರಿಕನ್ನರಿಗೆ ಮಂತ್ರದೀಕ್ಷೆಯನ್ನು ನೀಡಿದ್ದಾರೆ. ೧೯೬೦ರಿಂದ ಮಹಾರಾಜರ ನೇತೃತ್ವದಲ್ಲಿ ಹಾಲಿವುಡ್ ಕೇಂದ್ರ ಯಶಸ್ಸಿನ ಶಿಖರವನ್ನೇರಿತು. ೧೯೭೧ರಲ್ಲಿ ನಾನು ಬಂದಾಗ ಕೇಂದ್ರವು ಸಮೃದ್ಧವಾಗಿತ್ತು. ಭಾಷಣಗಳು ನಡೆಯುವಾಗ ಮಂದಿರವು ತುಂಬಿರುತ್ತಿತ್ತು. ಶ್ರೋತೃಗಳ ಅನುಕೂಲಕ್ಕಾಗಿ ಮೂರು ಸ್ಥಳಗಳಲ್ಲಿ ಭಾಷಣಗಳ ಟಿ.ವಿ. ಬಿತ್ತರ ವ್ಯವಸ್ಥೆ ಕೂಡ ಇತ್ತು. ಶ್ರೋತೃಗಳಲ್ಲಿ ಹೆಚ್ಚಿನವರು ಅಮೇರಿಕನ್ನರೆ. ಇವರೆಲ್ಲ ಮಹಾರಾಜರನ್ನು ಅತ್ಯಂತ ಶ್ರದ್ಧೆ ಹಾಗೂ ಗೌರವದಿಂದ ಕಾಣುತ್ತಿದ್ದರು. ಮಹಾರಾಜ್ ಒಂದು ದಿನ ನನಗೆ ಹೇಳಿದ್ದರು. 'I have been treated here as a dog, and again I have been treated as a God.' ('ನನ್ನನ್ನು ಇಲ್ಲಿ ನಾಯಿಯ ಹಾಗೆ ಕಾಣುತ್ತಾರೆ, ಅಂತೆಯೇ ದೇವರ ಹಾಗೆಯೂ ನೋಡುತ್ತಾರೆ.')

೧೯೪೪ರಲ್ಲಿ ಶ್ರೀಯುತ ಸ್ಪೆನ್ಸರ್ ಕೆಲೋಗ್ ಅವರಿಂದ ಅವರು ಸ್ಯಾಂಟಾ ಬಾರ್ಬರಾದ ಜಮೀನು ಹಾಗೂ ೧೦,೦೦೦ ಡಾಲರ್‌ಗಳನ್ನು ಪಡೆದಿದ್ದರೆಂದೂ, ಶ್ರೀ ಕೆಲೋಗ್ ಅವರು ತಮ್ಮಿಂದ ಮಂತ್ರದೀಕ್ಷೆ ಪಡೆದ ಶಿಷ್ಯರೆಂದೂ ಸ್ವಾಮಿ ಪ್ರಭವಾನಂದರು ವೇದಾಂತ ಸೊಸೈಟಿ ಆಫ್ ಕ್ಯಾಲಿಫೋರ್ನಿಯಾದ ಬಗ್ಗೆ ಹೇಳಿದ್ದರು. ದೀಕ್ಷೆ ಪಡೆದ ಸ್ವಲ್ಪ ಕಾಲದಲ್ಲೇ ಕೆಲೋಗ್ ಅವರು ತೀರಿಕೊಂಡರು. ಇವರೊಬ್ಬ ಶ್ರೀಮಂತ ವ್ಯಾಪಾರಿಯಾಗಿದ್ದರು. ನಂತರ ಸ್ಯಾಂಟಾ ಬಾರ್ಬರಾ ಆಶ್ರಮದ ಸ್ಥಾಪನೆಯಾಯಿತು. ೧೯೫೬ರಲ್ಲಿ ಅಲ್ಲಿನ ಮಂದಿರ ಪ್ರತಿಷ್ಠಾಪನೆಯಾದಾಗ ಸ್ವಾಮಿ ಮಾಧವಾನಂದರು ಹಾಗೂ ಸ್ವಾಮಿ ನಿರ್ವಾಣಾನಂದರು ಬಂದಿದ್ದರು.

ಗೆರಾಲ್ಡ್ ಹರ್ಡ್ ಬ್ರಿಟಿಷರು. ಅವರು ಅಮೆರಿಕದಲ್ಲಿ ನೆಲೆಸಿದ್ದರು. ಅವರೊಬ್ಬ ವಿಶ್ವಪ್ರಖ್ಯಾತ ಭಾಷಣಕಾರರಾಗಿದ್ದರು. ಮಧ್ಯಯುಗದ ಕ್ರೈಸ್ತ ಸಾಧುಗಳ ನಿವಾಸಗಳಂತೆಯೇ ಗೆರಾಲ್ಡ್ ಅವರು ೩೦೦ ಎಕರೆ ಜಮೀನಿನಲ್ಲಿ ಟ್ರಬುಕೊ ಕಾಲೇಜನ್ನು ಸ್ಥಾಪಿಸಿದರು. ವೈದಿಕ ಋಷಿಗಳು ಗಿರಿಗುಹೆಗಳಲ್ಲಿ ಧ್ಯಾನ ಮಾಡುವಂತೆ, ಸುಂದರವಾದ ಗೋಲಾಕಾರದ ಒಂದು ಮಂದಿರವನ್ನು ನಿರ್ಮಿಸಲಾಯಿತು. ಒಳಗೆ ಕತ್ತಲೆಯ ಹಾಗೂ ಎರಡು ಮೂರು ವರಸೆಗಳುಳ್ಳ ಗುಹೆ. ಕಾಲು ಮಡಚಿ ಕುಳಿತುಕೊಳ್ಳಲಾಗದವರು ಕಾಲುಚಾಚಿ, ಇಳಿಬಿಟ್ಟು ಕುಳಿತುಕೊಳ್ಳಬಹುದಿತ್ತು. ನಂತರ ಮಧ್ಯದ ವರಸೆಯನ್ನು ಏರಿಸಲಾಯಿತು. ೧೯೪೯ರಲ್ಲಿ ಗೆರಾಲ್ಡ್ ಈ ಜಮೀನು ಹಾಗೂ ಕಾಲೇಜನ್ನು ಸ್ವಾಮಿ ಪ್ರಭವಾನಂದರ ಕೈಗೊಪ್ಪಿಸಿದರು; ಅವರು ಅದನ್ನು 'Ramakrishna Monastery' ಎಂದು ಕರೆದರು. ಹಾಲಿವುಡ್ ಹಾಗೂ ಸ್ಯಾಂಟಾ ಬಾರ್ಬರಾದಲ್ಲಿ ನಾನು ಇದ್ದೆನಾದರೂ, ನನಗೆ ಅತ್ಯಂತ ಪ್ರಿಯವಾದ ಸ್ಥಳವೆಂದರೆ ಟ್ರಬುಕೊ. ನಾನು ಇದನ್ನು 'Maya free zone' (ಮಾಯೆಯಿಂದ ಮುಕ್ತವಾದ ವಲಯ)ಎಂದು ಕರೆಯುತ್ತಿದ್ದೆ. ನಿಜವಾಗಿಯೂ, ಸಾಧನ–ಭಜನೆ ಹಾಗೂ ಅಧ್ಯಯನಕ್ಕೆ ಇದಕ್ಕಿಂತ ಸೂಕ್ತವಾದ ಬೇರೊಂದು ಸ್ಥಳವನ್ನು ನಾನು ಕಂಡಿಲ್ಲ. ಅಪೂರ್ವ ವಾತಾವರಣ ಇಲ್ಲಿನದು. ದೊಡ್ಡ ಲೈಬ್ರರಿ, ನಿರ್ಜನ ಸ್ಥಳ, ಕೆಲವೇ ಸಾಧುಗಳಿದ್ದ ತಾಣ. ನಾನು ಇಲ್ಲಿದ್ದುಕೊಂಡು ಜಪ–ಧ್ಯಾನ, ಸಂಶೋಧನೆ ಹಾಗೂ ಬರವಣಿಗೆ ಮುಂತಾದ ಕೆಲಸಗಳನ್ನು ಮಾಡಿದ್ದೇನೆ.

*(ಮುಂದಿನ ಸಂಚಿಕೆಗೆ)*